# ಹೃದಯ ಮತ್ತು ಮೆದುಳು

ಪ್ರೊ. ಡಿ.ಕೆ. ರಾಜೇಂದ್ರ

*ವಿಚಾರ ಮತ್ತು ತರ್ಕಬುದ್ಧಿಯ ಪ್ರಮುಖ ಕೇಂದ್ರವಾದ ಮೆದುಳು ಹಾಗೂ ಭಾವನೆಗಳ ಕೇಂದ್ರವಾದ ಹೃದಯ ಪರಸ್ಪರ ಜೊತೆಯಲ್ಲಿ ಕೆಲಸ ಮಾಡಿದಾಗಲೇ ಒಳ್ಳೆಯ ಫಲಶ್ರುತಿ ದೊರೆಯಲು ಸಾಧ್ಯ ಎಂಬುದನ್ನು ಪ್ರತಿಪಾದಿಸಿರುವ ಪ್ರೊ. ಡಿ.ಕೆ.ರಾಜೇಂದ್ರ ಅವರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ನಿರ್ದೇಶಕರು.*

ಹೃದಯ ಮತ್ತು ಮೆದುಳು ಯಾವುದೇ ಪ್ರಾಣಿಯ ಬಹುಮುಖ್ಯ ಭಾಗಗಳು. ಅವೆರಡರಲ್ಲಿ ಯಾವುದೇ ಒಂದು ಸ್ವಲ್ಪ ನಿಷ್ಕ್ರಿಯಗೊಂಡರೂ ಅಥವಾ ಆಯ ತಪ್ಪಿದರೂ ಆ ಪ್ರಾಣಿ ತನ್ನ ಸಮತೋಲನವನ್ನು ಕಳೆದುಕೊಳ್ಳುತ್ತದೆ. ಅದರಿಂದ ಉಂಟಾಗುವ ದುಷ್ಪರಿಣಾಮಗಳು ಏಕಮುಖಿವಾದದ್ದಲ್ಲ, ದ್ವಿಮುಖಿಯಾದದ್ದು. ತಾನೂ ನಷ್ಟವನ್ನು, ನೋವನ್ನು ಅನುಭವಿಸುವುದರ ಜೊತೆಗೆ, ಇತರರಿಗೂ ಅದರ ಕಾವು ತಟ್ಟುತ್ತದೆ.

ಮನುಷ್ಯಪ್ರಾಣಿಯಲ್ಲಂತೂ ಈ ಅಸಮತೋಲನ ಬಹುಬೇಗ ಬೆಳಕಿಗೆ ಬರುತ್ತದೆ. ದುಷ್ಪರಿಣಾಮಗಳಿಗೆ ಕಾರಣವಾಗಿ ಅನಾಹುತಗಳ ಸೃಷ್ಟಿಗೂ ಕಾರಣವಾಗುತ್ತದೆ. ಪ್ರತಿಯೊಂದು ಪ್ರಾಣಿಯ ಶರೀರದ ಒಂದೊಂದು ಅಂಗಕ್ಕೂ ಅನ್ಯೋನ್ಯ ಸಂಬಂಧವಿರುವುದೇನೋ ನಿಜ. ಅದು ದೇವರ ಸೃಷ್ಟಿ. ಅವು ಪರಸ್ಪರ ಹೊಂದಾಣಿಕೆಯಿಂದ ಕಾರ್ಯನಿರ್ವಹಿಸಿದರೆ ಎಲ್ಲವೂ ಸರಿಹೋಗುತ್ತದೆ. ಆದರೆ ಕೆಲವೊಮ್ಮೆ ಹಾಗಾಗುವುದಿಲ್ಲ. ಪ್ರಕೃತಿಗೆ ವಿರುದ್ಧವಾಗಿ ನಡೆಯುವುದೇ ಒಂದು ದೊಡ್ಡ ಸಾಹಸವೆಂದು ಪ್ರತಿಯೊಂದು ಜೀವಿಯೂ ಭಾವಿಸಿದಂತೆ ತೋರುತ್ತದೆ. "ದೇವರು ಮನುಷ್ಯರನ್ನು ಸೃಷ್ಟಿಸಿದ, ಮನುಷ್ಯ ಗುಲಾಮರನ್ನು ಸೃಷ್ಟಿಸಿದ" ಎಂಬಂತಾಗಿರುವುದೇ ಹೆಚ್ಚು. ಅನಾಹುತಗಳ ಪರಂಪರೆಗೆ ಮಾನವನ ಈ ಮನೋಭಾವವೇ ಕಾರಣವಾಗಿದೆ.

ಇಂತಹ ಸಂದರ್ಭಗಳಲ್ಲಿ "ಹೃದಯ ಮತ್ತು ಮೆದುಳಿ"ನ ಪಾತ್ರ ಹೆಚ್ಚಾಗಿರುತ್ತದೆ. ಜೀವನದ ಎಲ್ಲ ಆಗುಹೋಗುಗಳ ಸಂದರ್ಭಗಳಲ್ಲಿ ಇವೆರಡೂ ಬಹುಮುಖ್ಯ ಪಾತ್ರ ವಹಿಸುತ್ತವೆ. ತೀರ್ಮಾನಗಳು ಹಾಗೂ ಕೆಟ್ಟ ಮತ್ತು ಒಳ್ಳೆಯ ಪರಿಣಾಮಗಳು ಅವುಗಳ ತೀರ್ಪನ್ನೇ ಅವಲಂಬಿಸಿರುತ್ತವೆ. ಈ ಎರಡೂ ಅಂಗಗಳು ಎಷ್ಟು ಸೂಕ್ಷ್ಮವೋ, ಅಷ್ಟೇ ಹೆಚ್ಚಿನ ಕಾರ್ಯಭಾರವನ್ನು ಹೊತ್ತ ಮಹತ್ವದ ಭಾಗಗಳು. ಕೆಲವೊಮ್ಮೆ ಇವೆರಡೂ ಘರ್ಷಣೆಯಲ್ಲಿ ತೊಡಗುವುದೂ ಉಂಟು. ಎರಡರ ನಡುವೆ ಸಂವಾದ ಏರ್ಪಡುವುದೂ ಸಾಮಾನ್ಯ. ಇಂತಹ ಸಂದರ್ಭದಲ್ಲಿ ಉಂಟಾಗುವ ಪರಿಣಾಮಗಳು ಹೀಗೆಯೇ ಇರುತ್ತವೆ ಎಂದು ಹೇಳಬರುವುದಿಲ್ಲ. ಹೃದಯ-ಮೆದುಳಿನ ನಡುವಣ ಸ್ಪರ್ಧೆ, ಅಸಹಕಾರ, ಹಮ್ಮು-ಬಿಮ್ಮು ಇತ್ಯಾದಿಗಳು ಕೆಲವೊಮ್ಮೆ ಅನಾಹುತಗಳ ಪರಂಪರೆಗೆ ಕಾರಣವಾಗಬಹುದು.

**ಹದವನರಿತು ನಡೆದರೆ ಬಾಳು, ಇಲ್ಲವಾದರೆ ಗೋಳು.**

ಈ ಎರಡೂ ಮುಖ್ಯಭಾಗಗಳನ್ನು ಆ ದೇವರು ಎಷ್ಟು ಸುರಕ್ಷಿತವಾಗಿ ಸಂರಕ್ಷಿಸಿಟ್ಟಿದ್ದಾನೆಂದರೆ, ಹೊರಗಿನ ಯಾವ ಶತ್ರುಗಳೂ ಅವನ್ನು ಸುಲಭವಾಗಿ ಮುಟ್ಟಲಾರವು, ಆಕ್ರಮಣ ನಡೆಸಲಾರವು. ಒಂದು ದೇಶದ ಅತಿಮುಖ್ಯ ನಾಯಕನಿಗೆ ಕೊಡುವಂತಹ ವಿಶೇಷ ಭದ್ರತೆಯನ್ನು ಆ ದೇವರೇ ಅವೆರಡಕ್ಕೂ ಒದಗಿಸಿದ್ದಾನೆ. ಹಾಗೆ ನೋಡಿದರೆ "ಹೃದಯ ಮತ್ತು ಮೆದುಳು"ಗಳಿಗೆ ಹೊರಗಿನ ಶತ್ರುಗಳಿಗಿಂತ ಒಳಗಿನ ಶತ್ರುಗಳೇ ಹೆಚ್ಚು. ಮೆದುಳು ಶರೀರದ ಉತ್ತುಂಗ ಭಾಗದಲ್ಲಿ ಸುರಕ್ಷಿತವಾಗಿ ಅಡಗಿದ್ದರೆ, ಮತ್ತೊಂದು ಅಂಗವಾದ ಹೃದಯ ಅಷ್ಟೇ ಸುರಕ್ಷಿತವಾಗಿ ಶರೀರದ ಮಧ್ಯಬಾಗದಲ್ಲಿ ಆಶ್ರಯ ಪಡೆದಿದೆ. ಇಲ್ಲಿ ಸವಾಲು ಎದುರಾಗುವುದು—ಶರೀರದ ಉತ್ತುಂಗ ಭಾಗ ಮುಖ್ಯವೆ? ಅಥವಾ ಶರೀರದ ಹೃದಯಭಾಗ ಮುಖ್ಯವೇ? ಎಂಬುದರಲ್ಲಿ.

ಮಾನವನ ಶಿರೋಭಾಗದಲ್ಲಿ ಸ್ಥಾನಪಡೆದಿರುವ ಮೆದುಳು ಬುದ್ಧಿಯ, ಜ್ಞಾನದ ಕೇಂದ್ರಬಿಂದು. ಯಾವುದೇ ವಸ್ತು-ವಿಷಯಗಳ ಬಗ್ಗೆ ಅರಿವನ್ನು ಮೂಡಿಸಲು ಅದು ನೆರವಾಗುತ್ತದೆ. ಅಂತಹ ಜ್ಞಾನಶಕ್ತಿಯ ಮೂಲಕ ನಮ್ಮ ಬುದ್ಧಿಶಕ್ತಿ ಹಾಗೂ ಮಾನಸಿಕ ಶಕ್ತಿಗಳು ಬಲಗೊಳ್ಳುತ್ತವೆ. ಜ್ಞಾನವಂತನಾದ ವ್ಯಕ್ತಿ ಹೆಚ್ಚು ಬುದ್ಧಿವಂತನೆನಿಸಿ, ಯಾವುದೇ ವಿಷಯದಲ್ಲಾದರೂ ಪ್ರಾವೀಣ್ಯವನ್ನು ತೋರಬಲ್ಲ ಚತುರನಾಗಿರುತ್ತಾನೆ. ಎಂತಹುದೇ ವಿಷಯದ ಬಗ್ಗೆ ಗಂಟೆಗಟ್ಟಲೆ ಚರ್ಚಿಸಿ ತನ್ನ ಬುದ್ಧಿಶಕ್ತಿಯ ಮೂಲಕ ಗೆಲ್ಲಬಲ್ಲ ನಿಷ್ಣಾತನಾಗಿರುತ್ತಾನೆ. ಕಲೆ, ವಿಜ್ಞಾನ, ತರ್ಕ, ಅರ್ಥಶಾಸ್ತ್ರ, ಜೋತಿಷ್ಯ, ವ್ಯಾಕರಣ, ಸಾಹಿತ್ಯ ಹೀಗೆ ಎಲ್ಲವುಗಳ ಬಗ್ಗೆ ಅವನು ವಾದಿಸಬಲ್ಲ, ವಾದಿಸಿ ಗೆಲ್ಲಬಲ್ಲ. ಅವನ ಮೆದುಳಿನ ಶಕ್ತಿ ಬಲವಾಗಿದ್ದಷ್ಟೂ ಜ್ಞಾನದ ಹಾಗೂ ತರ್ಕದ ಶಕ್ತಿಯೂ ಪ್ರಖರವಾಗಿರುತ್ತದೆ. ಎಲ್ಲ ರಂಗಗಳಲ್ಲಿಯೂ ಜೈಸಿ ಬರಬಲ್ಲೆನೆಂಬ ಹುಮ್ಮಸ್ಸನ್ನು ವ್ಯಕ್ತಿಯಲ್ಲಿ ಅದು ತುಂಬುತ್ತದೆ. ಕೇವಲ ಬುದ್ಧಿಗೆ ತನ್ನನ್ನು ಅರ್ಪಿಸಿಕೊಂಡು ಮೆದುಳಿಗಷ್ಟೇ ಪ್ರಾಶಸ್ತ್ಯ ಕೊಟ್ಟ ವ್ಯಕ್ತಿ

ಯಂತ್ರಮಾನವನೆನಿಸಿದರೆ ಆಶ್ಚರ್ಯವಿಲ್ಲ. ಏಕೆಂದರೆ, ಯಂತ್ರಕ್ಕೆ ಯಾವಾಗಲೂ ನಿಯಮಕ್ಕೆ ಹೊರತಾದ ತೀರ್ಪನ್ನು ನೀಡಲು ಸಾಧ್ಯವಾಗುವುದಿಲ್ಲ. ನಿಯಮಗಳನ್ನು ಮುರಿಯುವುದು ಎಷ್ಟೋ ಸಂದರ್ಭಗಳಲ್ಲಿ ಅನಿವಾರ್ಯವಾಗುತ್ತದೆ. ಆದರೆ ಅದರಿಂದ ಯಾರಿಗೂ ಅನಾವಶ್ಯಕವಾದ ತೊಂದರೆ ಆಗಬಾರದು ಹಾಗೂ ಅದರ ಮುಂದುವರಿಕೆಯೇ ಒಂದು ನಿಯಮವಾಗಬಾರದು ಅಷ್ಟೆ. ಒಬ್ಬ ನಿರಪರಾಧಿಯ ಪ್ರಾಣರಕ್ಷಣೆಯಲ್ಲಿ ಹೇಳುವ ಸುಳ್ಳು ಅದು ಸುಳ್ಳೆನಿಸುವುದಿಲ್ಲ. ಬುದ್ಧಿಯಷ್ಟೇ ಕೆಲಸ ಮಾಡಿ ಮೆದುಳಿನ ಮಹತ್ವವನ್ನು ಎತ್ತಿತೋರುವ ಕಡೆ ಇಂತಹವುಗಳಿಗೆ ಅವಕಾಶ ವಿರುವುದಿಲ್ಲ ಅಷ್ಟೆ.

ಮೆದುಳಿನ ಶಕ್ತಿಯನ್ನು ಬಲಗೊಳಿಸಿಕೊಂಡ ಒಬ್ಬ ವ್ಯಕ್ತಿ ತನ್ನ ವಾಕ್ಚಾತುರ್ಯದಿಂದ ನಿರಪರಾಧಿಯನ್ನು ಅಪರಾಧಿಯನ್ನಾಗಿಸ ಬಲ್ಲ; ಅಪರಾಧಿಯನ್ನು ನಿರಪರಾಧಿಯನ್ನಾಗಿಸಬಲ್ಲ. ಅದರಿಂದ ಅಪಾರ ಹಣಗಳಿಸಬಲ್ಲ, ಕೀರ್ತಿಯನ್ನೂ ಪಡೆಯಬಲ್ಲ. ಜೋಡಿ ಕೊಲೆಗಳನ್ನು ಮಾಡಿ ಕಟಕಟೆಯಲ್ಲಿ ನಿಂತ ಅಪರಾಧಿಯ ಬಗ್ಗೆ ವಕಾಲತ್ತು ವಹಿಸಿ ತನ್ನ ಬುದ್ಧಿಬಲದಿಂದ ಅವನ ಬಿಡುಗಡೆಗೆ ಕಾರಣನಾದ ವಕೀಲನ ಬಗ್ಗೆ ಬಿಡುಗಡೆ ಹೊಂದಿದ "ಅಪರಾಧಿ" ಬಹಳ ಸೋಜಿಗದಿಂದ ಹೇಳಿದ ಮಾತುಗಳೆಂದರೆ: "ಸ್ವಾಮಿ, ನಿಜವಾಗಿಯೂ ಆ ಜೋಡಿಕೊಲೆಗಳನ್ನು ಮಾಡಿದವನು ನಾನೇ. ಆದರೆ ನಿಮ್ಮ ವಾದವನ್ನು ಕೇಳಿದಮೇಲೆ ಈಗ ನನಗನ್ನಿಸುತ್ತಿದೆ —ಈ ಕೊಲೆಗಳನ್ನು ಮಾಡಿದವರು ಯಾರು? ಎಂದು." ಮಾತಿನ ಮೋಡಿ ಅಂತಹುದು. ಅದಕ್ಕೆ ಬೇಕಾದದ್ದು ತರ್ಕಬುದ್ಧಿ ಅಷ್ಟೇ. ಮೆದುಳು ಚುರುಕಾಗಿ ಕೆಲಸ ಮಾಡಿದರೆ ಏನೆಲ್ಲವೂ ಸಾಧ್ಯ. ಅದರ ವೇಗ ಮತ್ತೂ ಹೆಚ್ಚಾದರೆ ಅಪಾಯ ಇನ್ನೂ ಹೆಚ್ಚು.

ಆದರೆ ಹೃದಯ ಇಂತಹ ಯಾವುದೇ ಅಕೃತ್ಯಗಳಿಗೆ, ಅತಿ ರೇಕಗಳಿಗೆ ಆಸ್ಪದ ಕೊಡುವುದಿಲ್ಲ. ಏಕೆಂದರೆ ಅದರಲ್ಲಿ—ದಯೆ, ಸಹನೆ, ಸಹಾನುಭೂತಿ, ಕರುಣೆ, ಅನುಕಂಪ ಮುಂತಾದ ಮಾನವೀಯ ಭಾವನೆಗಳು ತುಂಬಿರುತ್ತವೆ. ಪ್ರೇಮಗಂಗೆಯ ಜನ್ಮಸ್ಥಳವೇ ಹೃದಯ. ವ್ಯಕ್ತಿಯ ವ್ಯಕ್ತಿತ್ವಕ್ಕೆ ರೂಪುಕೊಡುವ ಕೇಂದ್ರಸ್ಥಳ ಅದು. ಹಲವು ಜನ್ಮಗಳ ಸಂಸ್ಕಾರ ಅದಕ್ಕಿರುತ್ತದೆ. ಅದು ಮೆದುಳಿನಂತೆ ಗೆಲುವನ್ನಷ್ಟೇ ಗುರಿಯಾಗಿಸಿಕೊಂಡು ಕೆಲಸ ಮಾಡುವುದಿಲ್ಲ. ಗೆಲುವಿನಷ್ಟೇ ಅದರ ಪರಿಣಾಮಗಳನ್ನೂ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತದೆ. ಒಬ್ಬ ವ್ಯಕ್ತಿಯನ್ನು ವ್ಯಕ್ತಿಯನ್ನಾಗಿ ನಿಲ್ಲಿಸುವಲ್ಲಿ ಮೆದುಳಿಗಿಂತ ಹೃದಯದ ಪಾತ್ರ ಹೆಚ್ಚಾಗಿ ಕಂಡುಬರುವುದು ಈ ಕಾರಣಕ್ಕಾಗಿ. "ಕಲ್ಲುಹೃದಯಿ" "ಮೃದುಹೃದಯಿ" ಎಂಬಂತಹ ಮಾತುಗಳನ್ನು ಪರಿಶೀಲಿಸುವಾಗ, "ಮೆದುಳು-ಹೃದಯ"ಗಳಲ್ಲಿನ ಸಂಬಂಧದ ಏರುಪೇರುಗಳೇ ಕಾರಣ ಎಂಬುದನ್ನು ಗಮನಿಸಬೇಕಾಗುತ್ತದೆ.

ದಯೆ ಇಲ್ಲದ ಧರ್ಮಗುರು, ಸಹನೆ ಇಲ್ಲದ ಶಿಕ್ಷಕ, ಸಹಾನುಭೂತಿ ಇಲ್ಲದ ವೈದ್ಯ, ಕರುಣೆ ಇಲ್ಲದ ತಂದೆ, ಮಮತೆ ಇಲ್ಲದ ಮಾತೆ, ಅನುಕಂಪ ಗುಣವಿಲ್ಲದ ಸಮಾಜಸೇವಕ— ಇವರೆಲ್ಲ ಆ ಸ್ಥಾನಕ್ಕೆ ಅನರ್ಹರೆನಿಸುತ್ತಾರೆ. ತಮ್ಮ ಬುದ್ಧಿಯ ಬಲದಿಂದ ಅಥವಾ ಸ್ಥಾನಬಲದಿಂದ ಇವರೆಲ್ಲ ಏನೆಲ್ಲ ಸಾಧಿಸಿ ದರೂ, ಹೃದಯಸಂಬಂಧವನ್ನು ಕಳೆದುಕೊಂಡ ಯಾವ ಕಾರ್ಯವೂ ನಿರೀಕ್ಷಿತ ಫಲವನ್ನು ನೀಡಲಾರದು. ಹೃದಯಹೀನ ನಾದವನು ಒಂದು ರೀತಿ ಬುದ್ಧಿಹೀನನಾದಂತೆಯೇ. ಏಕೆಂದರೆ ಅದರಿಂದ ಪೂರ್ಣಫಲ ದೊರೆತಂತಾಗುವುದಿಲ್ಲ. ಹೃದಯ ಕೆಲಸ ಮಾಡುವ ಕಡೆ ಬುದ್ಧಿಯ ಅಥವಾ ಮೆದುಳಿನ ಆವಶ್ಯಕತೆ ಅಷ್ಟಾಗಿ ಇಲ್ಲದಿರಬಹುದು; ಆದರೆ ಬುದ್ಧಿ ಕೆಲಸ ಮಾಡುವ ಕಡೆ ಹೃದಯದ ಅನಿವಾರ್ಯತೆ ಇದ್ದೇ ಇರುತ್ತದೆ. ಮೆದುಳಿನ ಶಕ್ತಿಯ ಮೂಲಕ ಹೊರಹೊಮ್ಮಿದ ಬುದ್ಧಿ ವ್ಯಕ್ತಿಯನ್ನು ಏಕ ಮುಖವಾಗಿ ಎತ್ತ ಬೇಕಾದರೂ ಕೊಂಡೊಯ್ಯಬಹುದು. ಆದರೆ ಹೃದಯಸಂಬಂಧವಿದ್ದಾಗ ಅದು ಹಾಗಾಗಲು ಬಿಡುವುದಿಲ್ಲ. ಏಕೆಂದರೆ ಹೃದಯವಂತಿಕೆ ಸಂಸ್ಕಾರದಿಂದ ಸಿದ್ಧಗೊಂಡದ್ದು. ಅದಕ್ಕೆ ವಿವೇಕದ ಜೊತೆಗೆ ವಿವೇಚನಾ ಶಕ್ತಿಯೂ ಬೆನ್ನೆಲುಬು ಆಗಿರುತ್ತದೆ. ಬುದ್ಧಿಯ ಬಲದಿಂದ ಒಬ್ಬ ವ್ಯಕ್ತಿ ಸ್ವಾರ್ಥಿಯಾಗ ಬಹುದು, ಅನ್ಯಾಯವೆಸಗಬಹುದು. ಆದರೆ, ಹೃದಯವಂತ ನೊಬ್ಬ ಹಾಗೆ ನಡೆದುಕೊಳ್ಳಲಾರ.

**ನಿಮ್ಮನ್ನು ನಿಭಾಯಿಸುವಾಗ ಮೆದುಳನ್ನು ಉಪಯೋಗಿಸಿ, ಇತರರ ವಿಷಯದಲ್ಲಿ ಹೃದಯವನ್ನು ಉಪಯೋಗಿಸಿ.** —*The English Digest.*

ಮನಸ್ಸು ಹೃದಯ ಸಂಬಂಧಿಯಾದದ್ದು. ಬುದ್ಧಿ ಮೆದುಳು ಸಂಬಂಧಿಯಾದದ್ದು. "ಮನಸ್ಸು ಸಂಪೂರ್ಣ ಸಾಧಕನ ವಶವರ್ತಿಯಾಗಿ ಪವಿತ್ರವಾದಾಗ ಅದೇ ಅವನಿಗೆ ಗುರುವಾಗುತ್ತದೆ" ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅಂಥ ಶುದ್ಧಮನಸ್ಸಿನಿಂದ ಏಳುವ ಭಾವತರಂಗಗಳು ವ್ಯಕ್ತಿಯನ್ನು ತನ್ನ ಗುರಿಯೆಡೆಗೆ ಕೊಂಡೊಯ್ಯುವಲ್ಲಿ ಸಫಲವಾಗುತ್ತವೆ. ಅಂತಿಮ ಸತ್ಯ ಬುದ್ಧಿಯೊಂದರಿಂದಲೇ ಗೋಚರಿಸುವಂತಹುದಲ್ಲ, ಅದು ಅಂತರ್ಜ್ಞಾನ(Intuition)ಕ್ಕೆ ಸಿಗುವ ವಿಷಯ ಎಂಬುದೇ ಶ್ರೀರಾಮ ಕೃಷ್ಣರ ಅಭಿಪ್ರಾಯ. ನಿರ್ಮಲ ಅಂತಃಕರಣ ಬೆಳೆದಂತೆಲ್ಲಾ, ಆತ್ಮಾನುಭವ ಎಚ್ಚರಗೊಂಡು ಸತ್ಯಶೋಧನೆಯಲ್ಲಿ ತೊಡಗುತ್ತದೆ. ಶ್ರೀರಾಮಕೃಷ್ಣರು ಬುದ್ಧಿಯಿಂದ ಸಿದ್ಧಗೊಂಡ ತರ್ಕಕ್ಕಿಂತ, ಹೃದಯದಿಂದ ಹೊರಸೂಸಿದ ಅಂತಃಕರಣಕ್ಕೆ ಹೆಚ್ಚು ಮಾನ್ಯತೆ ನೀಡುತ್ತಾರೆ. ಹಾಗೆಂದು ಅಂತಃಕರಣ ಬುದ್ಧಿಗೆ ವಿರೋಧಿ ಎಂದಲ್ಲ. ಆದರೆ ಬುದ್ಧಿಗೆ ನಿಲುಕದ ಎಷ್ಟೋ ಸಂಗತಿಗಳನ್ನು ಅಂತಃಕರಣ ಅರಿಯಬಲ್ಲದು. ಸ್ವಾಮಿ ವಿವೇಕಾನಂದರು ಇವೆರಡರ ಸಂಬಂಧ ಹಾಗೂ ಕಾರ್ಯಗಳನ್ನು ಅತ್ಯಂತ ಸೊಗಸಾಗಿ ಒಂದು ಕಡೆ ಹೀಗೆ ಹೇಳಿದ್ದಾರೆ: "ಚಲನೆಗೆ ಶಕ್ತಿಯಿಲ್ಲದ ಅಂಗದಂತೆ ಬುದ್ಧಿ, ಭಾವ ಪ್ರವೇಶಿಸಿ ಚಲನೆಯನ್ನು ಕೊಟ್ಟಾಗಲೇ ಅದು ಚಲಿಸಿ ಬೇರೆ ವಸ್ತುವಿನ ಮೇಲೆ ಪರಿಣಾಮಕಾರಿಯಾಗು ವುದು." ಹಾಗಾಗಿ ಬುದ್ಧಿ-ಭಾವ (ಮೆದುಳು-ಹೃದಯ)ಗಳೆರಡೂ

ಪರಸ್ಪರ ಜೊತೆಯಲ್ಲಿ ಕೆಲಸ ಮಾಡಿದಾಗಲೇ ಒಳ್ಳೆಯ ಫಲಶ್ರುತಿ ದೊರೆಯಲು ಸಾಧ್ಯ. ದೇವರನ್ನು ತರ್ಕಬುದ್ಧಿಯಿಂದ ಪಡೆಯಲು ಸಾಧ್ಯವಿಲ್ಲ. ಏಕೆಂದರೆ ಅದು ಬುದ್ಧಿಗಮ್ಯವಲ್ಲ. ಅಂತೆಯೇ ಸತ್ಯವನ್ನೂ ಕೂಡ. ಇವೆರಡನ್ನೂ ಅರಿಯಲು ಬೇಕಾದದ್ದು ಅಂತಃಕರಣ—ಹೃದಯಸಂಬಂಧೀ ಕಾರ್ಯಾಚರಣೆಯಿಂದ ಮಾತ್ರ ಸಾಧ್ಯ.

ಹಾಗೆಂದು ತರ್ಕಬುದ್ಧಿಗೆ ಅವಕಾಶವೇ ಇಲ್ಲ ಎಂದು ಶ್ರೀರಾಮಕೃಷ್ಣರಾಗಲಿ, ಸ್ವಾಮಿ ವಿವೇಕಾನಂದರಾಗಲಿ ಪ್ರತಿಪಾದಿಸುವುದಿಲ್ಲ. ಆದರೆ ಅದರ ಮಿತಿಗಳನ್ನು ಸ್ವಾರಸ್ಯಕರವಾಗಿ ಮನದಟ್ಟಾಗಿಸುತ್ತಾರೆ. ವಿವೇಕಾನಂದರು ಒಂದು ಸೊಗಸಾದ ಹೋಲಿಕೆಯ ಮೂಲಕ ಅದನ್ನು ಸ್ಪಷ್ಟಪಡಿಸುತ್ತಾರೆ : "ಬುದ್ಧಿಯನ್ನು ಅನನುಭವಿ ಯುವಕನಿಗೂ ಅಂತರ್ದೃಷ್ಟಿಯನ್ನು ಅನುಭವಿ ಪ್ರಾಜ್ಞ ವಿವೇಕಿಯೂ ಆದ ವಯೋವೃದ್ಧನಿಗೂ ಹೋಲಿಸುತ್ತಾರೆ. ಯುವಕನನ್ನು ಹಾಗೂ ಅವನ ಯೌವನಾವಸ್ಥೆಯನ್ನು ವೃದ್ಧನು ಅಲ್ಲಗಳೆಯಲಾರನಲ್ಲವೇ? ಹಾಗೆಯೆ ಯುವಕನು ವೃದ್ಧನ ವೃದ್ಧಾಪ್ಯವನ್ನೂ ಅಸಂಗತವೆನ್ನಲಾರ. ಅದೇ ರೀತಿ ಬುದ್ಧಿಗೂ ಅಂತರ್ದೃಷ್ಟಿಗೂ ಯಾವುದೇ ವಿವಾದ, ಘರ್ಷಣೆ, ವಿರೋಧಗಳಿಲ್ಲ. ಇಂದು ಯುವಕನಾಗಿರುವವನು ಮುಂದೆ ವೃದ್ಧನಾಗುವುದು ಸಹಜವಾಗಿರುವಂತೆ ಬುದ್ಧಿಯು ತನ್ನ ಸ್ವ-ವಿರೋಧ ದೋಷಗಳಿಂದ ಮುಕ್ತಗೊಂಡಾಗ ಅಂತರ್ದೃಷ್ಟಿಯಾಗಿ ಬೆಳೆಯುತ್ತದೆ." ಪಾಂಡಿತ್ಯದ ಜೊತೆಯಲ್ಲಿ ಹೃದಯವೂ ಇರಬೇಕಾಗುತ್ತದೆ. ಇವೆರಡರ ಸಮತೋಲನವನ್ನು ಕಾಯ್ದುಕೊಳ್ಳುವುದು ಮುಖ್ಯ.

> **ಒಂದು ಕಡೆ ಬುದ್ಧಿಗೆ ಸಂಸ್ಕಾರ, ಮತ್ತೊಂದು ಕಡೆ ಹೃದಯಕ್ಕೆ ಸಂಸ್ಕಾರ. ಈ ಎರಡೂ ಬಗೆಯ ಸಂಸ್ಕಾರಗಳಿಂದ ಪರಿಪಕ್ವವಾಗತಕ್ಕದ್ದು ಜೀವದ ಅಂತರಂಗ. ಹಾಗೆ ಪರಿಪಕ್ವವಾದ ಜೀವವು ಜಗತ್ತಿನೊಳಕ್ಕೆ ಉಸಿರುವ ಸುಗಂಧವೇ ಸಂಸ್ಕೃತಿ.** — *ಡಿ.ವಿ.ಜಿ.*

ಅನೇಕ ಸಂದರ್ಭಗಳಲ್ಲಿ ಒಬ್ಬನೇ ವ್ಯಕ್ತಿಯಲ್ಲಿ ಹೃದಯ ಮತ್ತು ಮೆದುಳಿನ ನಡುವೆ (ಅಂತಃಕರಣ ಮತ್ತು ಬುದ್ಧಿ) ಘರ್ಷಣೆ ಉಂಟಾಗುತ್ತದೆ. ತಮ್ಮ ತಮ್ಮ ಪ್ರಾಬಲ್ಯವನ್ನು ಪ್ರದರ್ಶಿಸಲು ಅವೆರಡೂ ಸೆಣೆಸಾಡುವುದುಂಟು. ಜ್ಞಾನವಾಹಿನಿ, ಹೃದಯವಾಣಿ—ಇವೆರಡೂ ಸ್ಪರ್ಧೆಗಿಳಿದಾಗ ನಿಮ್ಮ ಕರ್ಣ ಹೃದಯವಾಣಿಯನ್ನೇ ಆಲಿಸಲಿ, ಗೌರವಿಸಲಿ. ಏಕೆಂದರೆ ಅದರಲ್ಲಿ ಬುದ್ಧ್ಯಾತೀತವಾದ ಭಾವವಿರುತ್ತದೆ. ಅಲ್ಲಿ ಅಂತಃಕರಣ ಕೆಲಸ ಮಾಡುತ್ತಿರುತ್ತದೆ. ಮೆದುಳಿನಂತೆ ಅದು 2+2=4 ಎಂಬ ಲೆಕ್ಕಾಚಾರದಲ್ಲಷ್ಟೇ ತೊಡಗಿರದೆ, ಅಷ್ಟಕ್ಕೇ ಕಟ್ಟುಬೀಳದೆ, ಆ ಮಿತಿಯನ್ನು ದಾಟಿದ ಸತ್ಯಶೋಧನೆಯಲ್ಲಿ ತೊಡಗಿರುತ್ತದೆ. ಅಂತಃಕರಣದ ಕೂಗು ಕಲ್ಲನ್ನೂ ಕರಗಿಸಬಲ್ಲದು; ಆದರೆ ಸಿಡಿಮದ್ದಿನಂತೆ ಅದು ಅನಾಹುತವನ್ನು ಉಂಟುಮಾಡುವುದಿಲ್ಲ. ಆತ್ಮಸಾಕ್ಷಿಗಿಂತ ದೊಡ್ಡ ವಿದ್ಯೆ ಮತ್ತೊಂದಿಲ್ಲ, ಸಾಕ್ಷಿ ಇನ್ನೊಂದಿಲ್ಲ. ☼

## ಬುದ್ಧಿಯ ಸೋಲು, ಹೃದಯದ ಗೆಲುವು

ಬಾಗ್ದಾದ್‌ನ ಕಾಲಿಫನಾದ ಅಲ್-ಮಾಮುನ್ ಹತ್ತಿರ ಒಂದು ಸುಂದರವಾದ ಅರೇಬಿಯನ್ ಕುದುರೆ ಇತ್ತು. ಒಂದು ಪಂಗಡದ ನಾಯಕನಾದ ಒಮಾಹ್ ಎಂಬುವವನ ಕಣ್ಣು ಅದರ ಮೇಲೆ ಬಿತ್ತು. ಅದನ್ನು ಕೊಂಡುಕೊಳ್ಳಬೇಕೆಂದು ಕಾಲಿಫನನ್ನು ವಿಚಾರಿಸಿದಾಗ ಅವನು ಅದನ್ನು ಕೊಡಲು ನಿರಾಕರಿಸಿದ. ಅದರ ಬದಲಿಗೆ ಅನೇಕ ಒಂಟೆಗಳನ್ನು ಕೊಡುತ್ತೇನೆಂದಾಗಲೂ ಅಲ್-ಮಾಮುನ್ ಕುದುರೆಯನ್ನು ಮಾರಲು ಒಪ್ಪಲಿಲ್ಲ. ಇದರಿಂದ ಕೋಪಗೊಂಡ ಒಮಾಹ್ ಮೋಸದಿಂದಾರೂ ಕುದುರೆಯನ್ನು ಪಡೆಯಬೇಕೆಂದು ನಿರ್ಧರಿಸಿದ.

ಅಲ್-ಮಾಮುನ್ ಯಾವ ರಸ್ತೆಯಲ್ಲಿ ಕುದುರೆ ನಡೆಸಿಕೊಂಡು ಬರುತ್ತಾನೆಂದು ಒಮಾಹ್‌ನಿಗೆ ತಿಳಿದಿತ್ತು. ಅವನು ರಸ್ತೆಯ ಬದಿಯಲ್ಲಿ ಭಿಕ್ಷುಕನ ವೇಷದಲ್ಲಿ ಕಾಯಿಲೆಯಿಂದ ನರಳುತ್ತಿರುವವನಂತೆ ಮಲಗಿಕೊಂಡನು. ಅಲ್-ಮಾಮುನ್ ತುಂಬ ದಯಾಳು. ಅವನು ಕುದುರೆ ಸವಾರಿ ಮಾಡಿಕೊಂಡು ಬರುತ್ತಿರುವಾಗ ಭಿಕ್ಷುಕನೊಬ್ಬನು ರಸ್ತೆಯ ಪಕ್ಕದಲ್ಲಿ ಬಿದ್ದಿರುವುದನ್ನು ಕಂಡು ಅವನಿಗೆ ಸಹಾಯ ಮಾಡಲು ಕುದುರೆಯಿಂದ ಇಳಿದನು. ಅವನ ಹತ್ತಿರ ಹೋಗಿ ಆತನ ಕಷ್ಟವನ್ನು ವಿಚಾರಿಸಿದನು.

"ಅಯ್ಯೊ, ನನ್ನ ಕಷ್ಟ ಏನು ಹೇಳಲಿ! ಅನೇಕ ದಿನಗಳಿಂದ ಊಟವೇ ಇಲ್ಲ. ನನಗೆ ಮೇಲೇಳಲೂ ಶಕ್ತಿಯಿಲ್ಲ," ಎಂದು ಭಿಕ್ಷುಕವೇಷಧಾರಿ ಗೋಗರೆದನು. ಕಾಲಿಫನು ಅವನ ಮೇಲಿನ ಕರುಣೆಯಿಂದ ಅವನನ್ನು ಎತ್ತಿ ತನ್ನ ಕುದುರೆಯ ಮೇಲೆ ಕೂರಿಸಿದನು—ಅವನನ್ನು ಊರಿಗೆ ಕರೆದುಕೊಂಡು ಹೋಗುವ ಉದ್ದೇಶದಿಂದ. ಆ ಧೂರ್ತನನ್ನು ಕುದುರೆಯ ಮೇಲೆ ಕೂರಿಸಿದ್ದೇ ತಡ, ತಕ್ಷಣ, ಕುದುರೆಯನ್ನು ಓಡಿಸಿಕೊಂಡು ಹೊರಟೇಹೋದ. ಅಲ್-ಮಾಮುನ್ ಕಕ್ಕಾಬಿಕ್ಕಿಯಾಗಿ ನೋಡತೊಡಗಿದ.

ಕೂಡಲೇ ಅವನಿಗೆ ಏನೊ ಅನಿಸಿತು, ಕುದುರೆಯ ಹಿಂದೆ ಓಡತೊಡಗಿದ. ಒಮಾಹ್‌ನು ತುಂಬ ದೂರ ಹೋದಮೇಲೆ ಹಿಂತಿರುಗಿ ನೋಡಿದ. ಕಾಲಿಫನು ದೂರದಲ್ಲಿ ಓಡಿಬರುತ್ತಾ ಇವನ ಕಡೆ ಕೈಬೀಸಿ ಕೂಗುತ್ತಿದ್ದಾನೆ : "ನೀನು ನನ್ನ ಕುದುರೆಯನ್ನು ಕದ್ದಿದ್ದೀಯ. ಆಗಲಿ. ಆದರೆ ನನ್ನದೊಂದು ಪ್ರಾರ್ಥನೆ." "ಏನದು?" ಎಂದು ಒಮಾಹ್ ಕೂಗಿ ಕೇಳಿದ. "ನಿನಗೆ ಈ ಕುದುರೆ ಹೇಗೆ ಸಿಕ್ಕಿತು ಎಂಬುದನ್ನು ಯಾರಿಗೂ ಹೇಳಬೇಡ." "ಏಕೆ?" ಎಂದು ಕೇಳಿದಾಗ ಅವನು ಹೇಳಿದ: "ಜನರಿಗೆ ನೀನು ಮಾಡಿದ ಮೋಸ ತಿಳಿದರೆ, ಯಾರಾದರೂ ಬೀದಿಯ ಪಕ್ಕದಲ್ಲಿ ನಿಜವಾಗಿ ನರಳುತ್ತ ಬಿದ್ದಿದ್ದರೂ ಅವನ ಕಡೆ ಗಮನ ಹರಿಸದೆ ಮುಂದೆ ಹೋಗುತ್ತಾರೆ."

**ಅಲ್-ಮಾಮುನ್ ಬುದ್ಧಿಯಲ್ಲಿ ಸೋತರೂ ಹೃದಯದಿಂದ ಗೆದ್ದಂತಾಯಿತು.**

(ಆಧಾರ : *The Prayer of the Frog*)